ಶ್ರೀ ಬಿ. ರಾಚಯ್ಯ.—ಅಲ್ಲಿ ಮುನಿಸಿಪಾಲಿಟಿ ಬಂದಿದೆ. ಅರಸೀಕೆರೆಯಲ್ಲಿ ಅದರ ಭಾಗವೂ ಇಲ್ಲ ಎಂದರೆ ನಮ್ಮ ಇಲಾಖೆಯಿಂದ ಪೂರಾ ಹಣವನ್ನು ಒದಗಿಸುವುದಕ್ಕೆ ಕಷ್ಟವಾಗುತ್ತದೆ. ಸಾರ್ವಜನಿಕರಿಂದ ಹಾಗೂ ಮುನಿಸಿಪಾಲಿಟಿಯಿಂದ ಹಣವನ್ನು ಒದಗಿಸಿಕೊಟ್ಟರೆ ಮಿಕ್ಕಿದ್ದನ್ನು ನಾವು ಹಾಕಿ ಕೆಲಸ ಪ್ರಾರಂಭ ಮಾಡಬಹುದು.

ರಾಜ್ಯದಲ್ಲಿ ಪ್ಲಾನ್ ಸ್ಕೀಂಗೆ ಸೇರಿದ ಶಾಲೆಗಳು

೨೨೪. ಶ್ರೀ ಎಂ. ಆನಂದರಾವ್ (ಶಿವಮೊಗ್ಗ) —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಪ್ಲಾನ್ ಸ್ಕೀಂಗೆ ಸೇರಿದ ಶಾಲೆಗಳ ಸಂಖ್ಯೆ ಎಷ್ಟು ಮತ್ತು ಸದರಿ ಶಾಲೆಗಳಲ್ಲಿರುವ ಉಪಾಧ್ಯಾಯರುಗಳು ಹಾಗೂ ಇತರೆ ನೌಕರರುಗಳ ಸಂಖ್ಯೆ ಎಷ್ಟು ?

(ಆ) ಮೇಲ್ಕಂಡ ಉಪಾಧ್ಯಾಯರುಗಳಿಗೆ ಹಾಗೂ ನೌಕರರುಗಳಿಗೆ ಪ್ರತಿ ಸಲ ೩-೪ ತಿಂಗಳಿಗೊಮ್ಮೆ ಸಂಬಳ ನೀಡಲಾಗುತ್ತಿರುವುದಕ್ಕೆ ಕಾರಣಗಳೇನು ಮತ್ತು ಈ ತೊಂದರೆ ನಿವಾರಿಸಲು ಯಾವ ಕ್ರಮಕೈಗೊಳ್ಳಲಾಗಿದೆ.

(ಇ) ಈ ಸ್ಕೀಂನ ಅವಧಿಯು ಎಲ್ಲಿಯವರೆಗೆ ಇದೆ.

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ರಾಜ್ಯದಲ್ಲಿ ಪ್ಲಾನ್ ಸ್ಕೀಂಮನಲ್ಲಿ ಬರುವ ಶಾಲೆಗಳು ೨೩೭
ಉಪಾಧ್ಯಾಯರುಗಳ ಸಂಖ್ಯೆ ೧೫೮೭
ಇತರೆ ನೌಕರರ ಸಂಖ್ಯೆ ೬೪೩ | ೨೨೫೦

(ಆ) ಸರ್ಕಾರದಿಂದ ಸುಮಾರು ಐದು ತಿಂಗಳಿಗೆ ಸಾಕಾಗುವಷ್ಟು ಹಣವನ್ನು ಒದಗಿಸಲಾಗಿದೆ ಯಾವುದೇ ಕಾರಣದಿಂದ ವಿಳಂಬ ಮಾಡದೆ ಕೂಡಲೇ ಬಿಡುಗಡೆ ಮಾಡಲು ಆದೇಶ ನೀಡಲಾಗಿದೆ.

(ಇ) ಆರನೇಯ ಯೋಜನೆ ಅವಧಿಯು ಕೊನೆಯವರೆಗೆ ಅಂದರೆ ೩೧-೩-೧೯೮೫ರ ವರೆಗೆ.

ಶ್ರೀ ಎಂ. ಆನಂದರಾವ್.—ಅಧ್ಯಕ್ಷರೇ, ಈ ಬಗ್ಗೆ ಕೇಂದ್ರದ ವಾರ್ಷಿಕ ಆನುದಾನದ ಹಣ ಎಷ್ಟು ? ಈ ಒಂದು ಸ್ಕೀಮ್ ಮುಗಿದ ಮೇಲೆ ಇವರಿಗೆ ಇತರೇ ಸರ್ಕಾರಿ ನೌಕರರಿಗೆ ಸಿಗುವ ಹಾಗೆ ಎಲ್ಲಾ ಸೌಲಭ್ಯಗಳು ಸಿಗುತ್ತದೆಯೇ ?

ಶ್ರೀ ಬಿ. ರಾಚಯ್ಯ.—ತಾವು ಕೇಳಿರುವ ಮೊತ್ತದ ಬಗ್ಗೆ ಅಂಕಿ ಅಂಶ ನನ್ನ ಹತ್ತಿರ ಇರುವ ಕಾಗದ ಪತ್ರಗಳಿಂದು ಸಿಗುತ್ತಿಲ್ಲ. ಅದನ್ನು ಬೇಕಾದರೆ ತರಿಸಿ ಕೊಡುತ್ತೇನೆ. ಈ ಯೋಜನೆ ಆದ ಮೇಲೆ ಕೂಡಾ ಇವರನ್ನು ನಮ್ಮ ಸರ್ಕಾರಿ ನೌಕರರಂತೆ ಮುಂದುವರಿಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಂಡಿದ್ದೇವೆ.

ವಿಷಯ.—ಕನಕಪುರ ರೂರಲ್ ಕಾಲೇಜಿನ ವ್ಯವಸ್ಥಾಪಕರ ವಿರುದ್ಧ ಅರ್ಪಿಸಲಾದ ಮನವಿಗಳು.

೩೪೫. ಕೆ. ಜಿ. ಶ್ರೀನಿವಾಸಮೂರ್ತಿ (ಕನಕಪುರ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಕನಕಪುರ ರೂರಲ್ ಕಾಲೇಜಿನ ಪ್ರಾಧ್ಯಾಪಕರು ಅಲ್ಲಿಯ ವ್ಯವಸ್ಥಾಪಕರ ವಿರುದ್ಧ ಕ್ರಮ ತೆಗೆದುಕೊಳ್ಳಲು ಮನವಿ ಸಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು ಮತ್ತು ಯಾವ ಯಾವ ಕ್ರಮಗಳನ್ನು ತೆಗೆದ ಕೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು). —

(ಅ) ಬಂದಿದೆ.

(ಆ) ಸರ್ಕಾರವು ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕರಿಂದ ಕರಡು ವರದಿಯನ್ನು ದಿನಾಂಕ ೧೦-೨-೧೯೮೨ ರಲ್ಲಿ ಕೇಳಿದೆ.

* * *

ವಿಷಯ.—ರಾಜ್ಯದಲ್ಲಿರುವ ಉರ್ದು ಮಾಧ್ಯಮ ಸರ್ಕಾರಿ ಪ್ರೌಢ ಶಾಲೆಗಳು

೨೭೦ ಶ್ರೀ ಎಂ. ಎಂ. ನಡಾಫ್ (ಶಿಗಾಂವ್). — ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಸರ್ಕಾರಿ ಕಾಲೇಜು, ಸಾವಣೂರು ಧಾರವಾಡ ಜಿಲ್ಲೆಯಲ್ಲಿ ಉಪನ್ಯಾಸಕರು, ಲೈಬ್ರರಿಯನ್, ಕ್ಲರ್ಕ್ ಅಟೆಂಡರ್ ವಾಚಮ್ಯಾನ್‌ರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ?

(ಆ) ಎಂ.ಎಲ್.ಎ. ಹಾಗೂ ಪ್ರಾಚಾರ್ಯರಿಂದ ಖಾಲಿ ಇರುವ ಹುದ್ದೆಯ ಬಗ್ಗೆ ಭರ್ತಿ ಮಾಡಲು ಪತ್ರಗಳು ಬಂದಿವೆಯೇ ;

(ಇ) ಖಾಲಿ ಇರುವ ಹುದ್ದೆಯ ಬಗ್ಗೆ ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಬಂದಿದೆ (ಸಾವಣೂರು ಸರ್ಕಾರಿ ಕಿರಿಯ ಕಾಲೇಜಿನಲ್ಲಿ)

(ಆ) ಬಂದಿವೆ

(ಇ) ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

* * *

ವಿಷಯ.—ಹಗರಿ ಬೊಮ್ಮನ ಹಳ್ಳಿಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ತರಗತಿ ಕೊಠಡಿಗಳಿಗೆ ಸ್ಥಳಾವಕಾಶದ ಕೊರತೆ.

೧೧೨ ಶ್ರೀ ಕೆ. ಚೆನ್ನಬಸವನಗೌಡ (ಕೂಡ್ಲಿಗಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನ ಹಳ್ಳಿಯಲ್ಲಿರುವ ಬಿ. ಬಿ. ಸರ್ಕಾರಿ ಪ್ರೌಢ ಶಾಲೆ ಕಿರಿಯ ಮಹಾವಿದ್ಯಾಲಯ ಇದಕ್ಕೆ ೧೧ ಕೊಠಡಿಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳು ಏನು :

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಹೌದು

(ಆ) ಹೆಚ್ಚಿನ ಕೊಠಡಿಗಳ ನಿರ್ಮಾಣಕ್ಕೆ ೧೯೮೪-೮೫ ರಲ್ಲಿ ಹಣ ಒದಗಿಸಲು ಪ್ರಯತ್ನಿಸಲಾಗುವುದು.

ಶ್ರೀ ಕೆ. ಚನ್ನಬಸವನ ಗೌಡ —ಮಾನ್ಯ ಅಧ್ಯಕ್ಷರೇ, ಪ್ರೌಢಶಾಲೆಯನ್ನು ಕಿರಿಯ ಮಹಾವಿದ್ಯಾಲಯವನ್ನಾಗಿ ಮಾಡಿರುವುದರಿಂದ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದ್ದು ಬಹಳ ತೊಂದರೆ ಯಾಗಿದೆ; ಹಂಗಾಮಿಯಾಗಿ ಹೆಡ್ಡಾಗಳನ್ನು ಹಾಕಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

---

* ಮಾನ್ಯ ಸದಸ್ಯರು ಗೈರುಹಾಜರಿ